ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈ-ಶಾ/ಮೂಸೌ/ಅ-ಬಿ/03/2011-12

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ: 18 -01-2012.

**ಜ್ಞಾಪನ**

ವಿಷಯ:- 2011-12ನೇ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಗಿರಿಜನ **ಉಪಯೋಜನೆ** (ಟಿ.ಎಸ್.ಪಿ) ಯೋಜನೆಯಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 86 ಯೋಯೋಕ 2011, ದಿನಾಂಕ: 20-12-2011 (ಇಡಿ 57 ಸ್ಕೀಮರ(ಯುನಿಕ್)2011, ದಿನಾಂಕ:20-12-2011)

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು (ಪೀಠೋಪಕರಣ, ಪಾಠೋಪಕರಣ ಡೆಸ್ಕ್/ಟೇಬಲ್/ಕುರ್ಚಿಗಳು/ ಅಲ್ಮೇರಾಗಳು/ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳು) ಒದಗಿಸುವ ಸಲುವಾಗಿ 2011-12 ನೇ ಸಾಲಿಗೆ ಗಿರಿಜನ **ಉಪಯೋಜನ (ಟಿಎಸ್‌ಪಿ) ಯೋಜನೆಯಡಿ,** ಲೆಕ್ಕ ಶೀರ್ಷಿಕೆ 2202-02-109-0-06-423 ಯೋಜನೆಯಡಿ ರೂ.65.50 ಲಕ್ಷಗಳ ಅನುದಾನವನ್ನು ಇಲಾಖೆಗೆ ಒದಗಿಸಲಾಗಿರುತ್ತದೆ. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ **ಮೂರನೇ** ತ್ರೈ-ಮಾಸಿಕ ಅನುದಾನವಾಗಿ ರೂ.16.37 ಲಕ್ಷಗಳನ್ನು ಸದರಿ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ವಿಜ್ಞಾನ ಸಂಯೋಜನೆಯನ್ನು ಬೋಧಿಸುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಯೋಗಾಲಯ ಉಪಕರಣಗಳ ಕೊರತೆ ಇರುವುದಾಗಿ ಕಾಲೇಜಿನ ಪ್ರಾಂಶುಪಾಲರುಗಳು ಮನವಿ ಮಾಡಿರುತ್ತಾರೆ. ಆದುದರಿಂದ ಈ ಕಂತಿನ ಅನುದಾನವಾದ ರೂ.16.00 ಲಕ್ಷಗಳನ್ನು ಈ ಜ್ಞಾಪನಕ್ಕೆ ಲಗತ್ತಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅವುಗಳ ಮುಂದೆ ತೋರಿಸಿರುವಂತೆ(ಅನುಬಂಧ-1ರಲ್ಲಿ ತಿಳಿಸಿರುವ 20 ಕಾಲೇಜುಗಳಿಗೆ) ಅವಶ್ಯಕತೆ ಇರುವ **ವಿಜ್ಞಾನ ವಿಭಾಗದ ಪ್ರಾಯೋಗಿಕ ಉಪಕರಣಗಳನ್ನು ಖರೀದಿಸುವ ಉದ್ದೇಶಕ್ಕೆ** ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮಂಜೂರು ಮಾಡಲಾಗಿದೆ.

**ಷರತ್ತುಗಳು:**

1. ಪಾರದರ್ಶಕತೆ ನಿಯಮಾನುಸಾರ ರೂ.1,00,000-00 ಕ್ಕಿಂತ ಹೆಚ್ಚಿನ ಖರೀದಿಯನ್ನು ಟೆಂಡರ್ ಮೂಲಕ ಹಾಗೂ ರೂ. 1,00,000-00 ಕ್ಕಿಂತ ಕಡಿಮೆ ಮೊತ್ತದ ಖರೀದಿಯನ್ನು ಕೊಟೇಷನ್ ಪಡೆದು ನಿಯಮಾನುಸಾರ ಅತೀ ಕಡಿಮೆ ದರವನ್ನು ಸೂಚಿಸಿರುವ ಸರಬರಾಜುದಾರರ ಮೂಲಕ ಖರೀದಿಸತಕ್ಕದ್ದು.
2. ವಿಜ್ಞಾನ ವಿಷಯಗಳಲ್ಲಿ 2012ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಪಠ್ಯಕ್ರಮವನ್ನು ಜಾರಿಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಅಗತ್ಯತೆಗೆ ಅನುಗುಣವಾಗಿ ಪ್ರಾಯೋಗಿಕ ಉಪಕರಣಗಳನ್ನು ಖರೀದಿಸುವುದು.
3. ಖರೀದಿಯು Description and Specification ಗೆ ಅನುಗುಣವಾಗಿರುವುದೇ ಎಂಬ ಬಗ್ಗೆ ದೃಢೀಕರಣ ಪತ್ರ ನೀಡತಕ್ಕದ್ದು.
4. ಸಂಬಂಧಿಸಿದ ಸರಬರಾಜುದಾರರಿಂದ ಬಿಲ್ಲುಗಳನ್ನು ನಾಲ್ಕು ಪ್ರತಿಗಳಲ್ಲಿ ಪಡೆಯತಕ್ಕದ್ದು ಹಾಗೂ ಖರೀದಿಸಿದ ಸಾಮಾನುಗಳನ್ನು ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಹಾಗೂ ಸಂಬಂಧಿಸಿದ ದಾಸ್ತಾನು ಪುಸ್ತಕದಲ್ಲಿ ನಮೂದಿಸಿರುವ ಬಗ್ಗೆ ದಾಸ್ತಾನು ಪ್ರಮಾಣ ಪತ್ರ (Stock Certificate) ಗಳನ್ನು ಬಿಲ್ಲುಗಳ ಹಿಂಬದಿಯಲ್ಲಿ ದಾಖಲಿಸತಕ್ಕದ್ದು.

5. ಖರೀದಿಸಿದ ವಸ್ತುಗಳಿಗೆ ಒಂದೇ ಬಾರಿಗೆ ಡಿಸಿ ಬಿಲ್ಲನ್ನು ನಾಲ್ಕು ಪ್ರತಿಗಳಲ್ಲಿ ಪ್ರಾಂಶುಪಾಲು ಸಿದ್ಧಪಡಿಸತಕ್ಕದ್ದು. ಡಿಸಿ ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆಯ ವಿವರಗಳನ್ನು ಸರಿಯಾಗಿ ನಮೂದಿಸಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.

6. ಬಿಡುಗಡೆಯಾದ ಅನುದಾನವು ರೂ. 1 ಲಕ್ಷದ ಒಳಗೆ ಇದ್ದಲ್ಲಿ ಪ್ರಾಚಾರ್ಯರು ಕೊಟೇಷನ್ ಮುಖಾಂತರ 31-01-2012 ರ ಒಳಗೆ ಖರೀದಿ ಪ್ರಕ್ರಿಯೆ ಪೂರೈಸುವುದು. ಯಾವುದೇ ಕಾರಣಕ್ಕೂ ಈ ಅನುದಾನವು Lapse ಆಗದಂತೆ ಬಳಸಿಕೊಳ್ಳಲು ಸೂಚಿಸಿದೆ. Lapse ಆದ ಪಕ್ಷದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಈ ಆದೇಶ ತಲುಪಿದ ಕೂಡಲೆ ನಿಯಮಾನುಸಾರ ಖರೀದಿಸುವುದು. ಖರೀದಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಸೂಚನೆಗಳನ್ನು ನಿರ್ಲಕ್ಷಿಸಿದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

7. ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಪ್ರಾಂಶುಪಾಲರು ಮೇಲ್ಕಂಡ ಸೂಚನೆಗಳನ್ನು ಪಾಲಿಸಿರುವ ಬಗ್ಗೆ ಎಚ್ಚರಿಕೆಯಿಂದ ಗಮನಿಸುವುದು ಮತ್ತು ಸಂಬಂಧಿಸಿದ ಬಿಲ್ಲುಗಳಿಗೆ ಮೇಲು ಸಹಿ ಮಾಡಿಕೊಡುವುದು. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳಿಗೆ ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತವನ್ನು ಸಂಪೂರ್ಣವಾಗಿ ಬಳಕೆ ಮಾಡಿ, ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಯ ಜಂಟಿ ನಿರ್ದೇಶಕರು(ಪರೀಕ್ಷೆ), ಇವರಿಗೆ ತಪ್ಪದೇ ದಿನಾಂಕ 04-02-2012ರೊಳಗೆ ಕಳುಹಿಸತಕ್ಕದ್ದು. ಹೊಸ ಕಾಲೇಜುಗಳಿಗೆ ಒಂದು ವೇಳೆ ಅನುದಾನ ಡ್ರಾ ಮಾಡಲು ಡ್ರಾಯಿಂಗ್ ಕೋಡ್ ಇನ್ನು ಇಲಾಖೆಯಿಂದ ಬಂದಿಲ್ಲವಾದರೆ ಆಯಾ ಜಿಲ್ಲಾ ಉಪನಿರ್ದೇಶಕರು ಅಂತಹ ಕಾಲೇಜಿನ ಅನುದಾನವನ್ನು ಡ್ರಾಮಾಡಿ ಖರೀದಿಸಿದ ವಸ್ತುಗಳು ಸರಬರಾಜುದಾರರಿಂದ ಸರಬರಾಜು ಆಗಿರುವುದನ್ನು ಪರಿಶೀಲಿಸಿ ನೇರವಾಗಿ ಪಾವತಿಸಲು ಕ್ರಮ ಕೈಗೊಳ್ಳುವುದು. ಸರ್ಕಾರದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆಯಲಿರುವ ಮಾಸಿಕ (MPIC) ವೆಚ್ಚದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲೆಯ ವೆಚ್ಚದ ವರದಿಯನ್ನು ಜಂಟಿ ನಿರ್ದೇಶಕರು (ಪರೀಕ್ಷೆ) ಇವರಿಗೆ ಮೇಲೆ ತಿಳಿಸಿದ ದಿನಾಂಕದೊಳಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಿದೆ.

8. ಬಿಡುಗಡೆಯಾದ ಅನುದಾನವನ್ನು ಮೇಲೆ ತಿಳಿಸಿರುವ ಬಾಬ್ತುಗಳಿಗೆ ಮಾತ್ರ ಬಳಸತಕ್ಕದ್ದು.

9. ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿದ ಪ್ರಾಯೋಗಿಕ ಉಪಕರಣಗಳ ಹೆಸರು, ಸಂಖ್ಯೆ, ತಗಲಿದ ಒಟ್ಟು ವೆಚ್ಚದ ವಿವರಗಳನ್ನೊಳಗೊಂಡ ವರದಿಯನ್ನು ಇಲಾಖೆಯ ಜಂಟಿ ನಿರ್ದೇಶಕರು ಪರೀಕ್ಷೆ ಇವರಿಗೆ ಕಳುಹಿಸತಕ್ಕದ್ದು, ಸರಬರಾಜಾದ ಉಪಕರಣಗಳ ಸಂಖ್ಯೆ ಅಥವಾ ಗುಣಮಟ್ಟದಲ್ಲಿ ಯಾವುದೇ ರೀತಿಯ ವ್ಯತಿರಿಕ್ತತೆ ಕಂಡುಬಂದಲ್ಲಿ ಈ ಸಂಬಂಧ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

10. ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವಾಗ ಸಬಂದಿಸಿದ ಉಪನ್ಯಾಸಕರಿಂದ ಅವಶ್ಯಕತೆ ಇರುವ ವಸ್ತುಗಳ ಬೇಡಿಕೆ ಪಟ್ಟಿಯನ್ನು ಪಡೆದು ನಂತರ ಖರೀದಿಸುವುದು.

11. ಪ್ರಯೋಗಾಲಯದ ವಸ್ತುಗಳು ಖರೀದಿಸುವಾಗ ವಸ್ತುಗಳ ದರಗಳು ಮತ್ತು ಖರೀದಿಸುವ ವಸ್ತುಗಳ ಗುಣಮಟ್ಟ ಆಯಾ ಜಿಲ್ಲೆಗಳಲ್ಲಿ ಏಕ ರೂಪ ಇರುವಂತೆ ಆಯಾ ಜಿಲ್ಲಾ ಉಪನಿರ್ದೇಶಕರು ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳುವುದು. ಈ ಸಂಬಂಧ ಪ್ರಾಂಶುಪಾಲರಿಗೆ ಸೂಚನೆ ನೀಡಿ ತಕ್ಷಣ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಆಯುಕ್ತರು
ಪದವಿ ಪೂರ್ವ ಶಿಕ್ಷಣ ಇಲಾಖೆ,

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಸಂಬಂಧಿಸಿದ ಖಜಾನಾಧಿಕಾರಿಗಳಿಗೆ
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
6. ಆಯವ್ಯಯ/ಲೆಕ್ಕಸಮನ್ವಯ ಅಧೀಕ್ಷಕರು
7. ಸಂಬಂಧಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
8. ಕಛೇರಿ ಪ್ರತಿ.

GOVERNMENT OF KARNATAKA
DEPARTMENT OF PRE UNIVERSITY EDUCATION
AMOUNT SANCTIONED TO PURCHASE FURNITURE & LAB EQUIPEMENTS FOR GOVT PU COLLEGES
DURING 2011-12 ( ADDITIONAL ) (TSP)

| SLNO | COL CD | COLLEGE NAME & ADDRESS | AMOUNT RELEASED<br>FURNITURE | <br>LABORATORY |
|---|---|---|---|---|
| 1 | DD208 | GOVT DJH PU COLLEGE<br>JALALPUR RAIBAG TQ<br>BELGAUM DT | | 80000.00 |
| 2 | DD223 | GOVT PU COLLEGE<br>MUGALIHAL KHANAPUR TQ<br>BELGAUM DIST | | 80000.00 |
| 3 | JH084 | GOVT PU COLLEGE<br>ADUR HANGAL TQ<br>HAVERI DT 581101 | | 80000.00 |
| 4 | JH193 | GOVT PU COLLEGE<br>RANIBENNUR<br>HAVERI DT 581115 | | 80000.00 |
| 5 | JH219 | GOVT PU COLLEGE<br>HIREKERUR<br>HAVERI DT 581111 | | 80000.00 |
| 6 | NN033 | GOVT DPBS PU COLLEGE<br>PERIYAPATNA<br>MYSORE DT 571107 | | 80000.00 |
| 7 | NN045 | GOVT PU COLLEGE FOR GIRLS<br>HUNSUR<br>MYSORE DT 571105 | | 80000.00 |
| 8 | NN057 | GOVT PU COLLEGE FOR GIRLS<br>PEOPLESPARK NAZARBAD<br>MYSORE 570010 | | 80000.00 |
| 9 | NN063 | GOVT PU COLLEGE<br>TALAKAD T NARASIPUR TQ<br>MYSORE DT 571122 | | 80000.00 |
| 10 | NN095 | GOVT PU COLLEGE<br>T NARASIPUR<br>MYSORE DT 571124 | | 80000.00 |
| 11 | NN213 | GOVT PU COLLEGE FOR GIRLS<br>DOUBLE ROAD<br>MYSORE | | 80000.00 |

GOVERNMENT OF KARNATAKA
DEPARTMENT OF PRE UNIVERSITY EDUCATION
AMOUNT SANCTIONED TO PURCHASE FURNITURE & LAB EQUIPEMENTS FOR GOVT PU COLLEGES
DURING 2011-12 ( ADDITIONAL ) (TSP)

| SLNO | COL CD | COLLEGE NAME & ADDRESS | AMOUNT RELEASED FURNITURE | LABORATORY |
|---|---|---|---|---|
| 12 | NN243 | GOVT PU COLLEGE<br>HEBBALU KR NAGAR TQ<br>MYSORE DIST | | 80000.00 |
| 13 | NN246 | GOVT PU COLLEGE<br>BEECHANAHALLI HD KOTE TQ<br>MYSORE DT | | 80000.00 |
| 14 | RK015 | GOVT PU COLLEGE FOR BOYS<br>KUSHTAGI<br>KOPPAL DT 584121 | | 80000.00 |
| 15 | RK048 | GOVT PU COLLEGE<br>MANGALORE YELBURGA TQ<br>KOPPAL DT 583237 | | 80000.00 |
| 16 | RK062 | GOVT PU COLLEGE<br>BEVOOR YELBURGA TQ<br>KOPPAL DT 583237 | | 80000.00 |
| 17 | RK133 | GOVT PU COLLEGE<br>HOSABANDIHARLAPUR<br>KOPPAL DIST | | 80000.00 |
| 18 | RK142 | GOVT PU COLLEGE<br>SIDDAPUR GANGAVATI TQ<br>KOPPAL DIST | | 80000.00 |
| 19 | RK155 | GOVT PU COLLEGE<br>HIRE SINDOGI<br>KOPPAL DIST | | 80000.00 |
| 20 | VV005 | GOVT PU COLLEGE<br>NAPOKLU MADIKERI TQ<br>COORG DT 571214 | | 80000.00 |
| | | TOTAL Rs. | 0.00 | 16,00,000.00 |

COMMISSIONER,
DEPT OF PU EDUCATION.ä